**<u>ದಿಃ18.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಲಾಯಿತು.</u>**

**<u>ವಾದಿ ಪರ ಜಿಪಿಎ ಹೊಲ್ಡರ್ ರವರ ಮುಖ್ಯ ವಿಚಾರಣೆ ಃ</u>** ಶ್ರೀ.ಇ.ಎಸ್.ಐ ಪರವಾಗಿ ಶ್ರೀ.ಟಿ.ಎನ್. ನ್ಯಾಯವಾದಿಗಳಿಂದಃ-

ನಾನು ನನ್ನ ಮುಖ್ಯ ವಿಚಾರಣೆಗೆ ಅನುಗುಣವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ವಾದಿಯು ತನ್ನ ಪರವಾಗಿ ಸಾಮಾನ್ಯ ಮುಕ್ತಿಯಾರೇ ನಾಮ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.8 ಎಂದು, ದಾವ ಸ್ವತ್ತಿಗೆ ಸಂಬಂದಿಸಿದ 6 ಕೈ ಬರವಣಿಗೆಯ ಪಹಣಿಗಳು ಮತ್ತು 1 ಎಮ್.ಆರ್. ವಹಿಯ ದಾಖಲೆಯನ್ನು ಹಾಗೂ ದಾವ ಸ್ವತ್ತಿಗೆ ಸಂಬಂದಿಸಿದ 2 ಹಾಳೆಯ 1 ಗಣಕೀಕೃತ ಪಹಣಿ ಮತ್ತು 1 ಗಣಕೀಕೃತ ಎಮ್.ಆರ್. ವಹಿಯ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.9 ರಿಂದ 17 ಎಂದು, ದಿಃ03.03.2016 ರಂದು ದಾವ ಸ್ವತ್ತಿಗೆ ಸಂಬಂದಿಸಿದಂತೆ ವಾದಿಯು ಬರೆದುಕೊಟ್ಟ ಕುಟುಂಬದೊಳಗಿನ ನೊಂದಾಯಿತ ದಾನಪತ್ರದ ದೃಡೀಕೃತ ದಾಖಲೆಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿ.ಪಿ.18 ಎಂದು ಗುರುತಿಸಲಾಯಿತು.

ವಾದಿಯು ಅನಾರೋಗ್ಯದಿಂದ ಬಳಲುತ್ತಿದ್ದು, ಈ ಸಂಬಂದ ಅವರ ವೈದ್ಯಕೀಯ ಪರೀಕ್ಷೆ ಮತ್ತು ಚಿಕಿತ್ಸೆಗೆ ಸಂಬಂದಿಸಿದ 8 ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.19 ರಿಂದ 26 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು